ಸಂಸ್ಕೃತಿಯ ಪಠ್ಯಗಳು ಎನ್ನುವುದು ಗಮನಾರ್ಹ.

'ಕೆರೆಗೆ ಹಾರ' ಕಥಾಚಲನವನ್ನು ಸ್ಥೂಲವಾಗಿ ಹೀಗೆ ಸಂಗ್ರಹಿಸಬಹುದು: ಊರ ಗೌಡ ಕೆರೆ ಕಟ್ಟಿಸುತ್ತಾನೆ. ಅಲ್ಲಿ ಬೊಗಸೆ ನೀರು ಬರುವುದಿಲ್ಲ. ಹೊತ್ತಗೆ ತೆಗೆಸಿ ಕೇಳಿದಾಗ ಸೊಸೆಹೆಣ್ಣನ್ನು ನರಬಲಿ ಕೊಡಬೇಕು ಎಂದಾಗುತ್ತದೆ. ಮನೆಯಲ್ಲಿ ಕಿರಿಸೊಸೆಯನ್ನು ಬಲಿಕೊಡುವ ನಿರ್ಧಾರವಾಗುತ್ತದೆ. ಸಂಗತಿ ಪರೋಕ್ಷವಾಗಿ ಸೊಸೆಗೆ ತಿಳಿಯುತ್ತದೆ. ಬದುಕುವ ಹುಡುಕಾಟ ನಡೆಸುತ್ತಾಳೆ. ಅಲ್ಲಿ ವಿಫಲಳಾಗಿ ಅನಿವಾರ್ಯಕ್ಕೆ ಕೊರಳೊಡ್ಡುತ್ತಾಳೆ. ಸುಳ್ಳು ನೆಪವೊಡ್ಡಿ ಸೊಸೆಯನ್ನು ಕೆರೆಗೆ ಇಳಿಸುತ್ತಾರೆ. ಹಾರವಾಗಿಸುತ್ತಾರೆ. ಆಕೆ ಸಾಯುತ್ತಾಳೆ. 'ಕೆರೆಗೆ ಹಾರ'ದ ಕರಾವಳಿ ಪಠ್ಯದ ಕಥಾಚಲನವನ್ನು ಸ್ಥೂಲವಾಗಿ ಹೀಗೆ ಸಂಗ್ರಹಿಸಬಹುದು. ಊರೆಲ್ಲ ಮರುಭೂಮಿಯಾಗಿದೆ. ತಾಯಿ ಹೊಸಕೆರೆ ಹೊಸ ಬಾವಿ ತೋಡಿಸುತ್ತಾಳೆ. ಹನಿ ನೀರು ಹರಿಯಲಿಲ್ಲ. ಕವಡೆ ಶಾಸ್ತ್ರ ಕೇಳುತ್ತಾರೆ. ಆಗ, ಕೆರೆಗೆ ನರ ಆಹುತಿ ಕೊಡಬೇಕು ಎಂದಾಗುತ್ತದೆ. ಮನೆಯಲ್ಲಿ ಕಿರಿಸೊಸೆಯನ್ನು ಹಾರಕೊಡುವ ತೀರ್ಮಾನವಾಗುತ್ತದೆ. ಸಂಗತಿ ಪರೋಕ್ಷವಾಗಿ ಸೊಸೆಗೆ ತಿಳಿಯುತ್ತದೆ. ಅವಳು ತವರಿಗೆ ಬರುತ್ತಾಳೆ. ವಸ್ತು ಸಂಕೇತಗಳನ್ನಿಟ್ಟು ಮುಂದಿನ ದುರಂತವನ್ನು ಸಾಂಕೇತಿಕವಾಗಿ ಆಡುತ್ತಾಳೆ. ಅತ್ತೆ ಸುಳ್ಳು ನೆಪವೊಡ್ಡಿ ಸೊಸೆಹೆಣ್ಣನ್ನು ಕೆರೆಗೆ ಇಳಿಸುತ್ತಾರೆ; ಹಾರವಾಗಿಸುತ್ತಾರೆ. ಆದರೆ ಆಕೆ ಸಾಯುವುದಿಲ್ಲ. ಅಣ್ಣನ ಆಸರೆಗೆ ಸಿಗುತ್ತಾಳೆ. ತವರಿನಲ್ಲಿ ಅಣ್ಣ, ತಂಗಿ ಸುಖವಾಗಿರುತ್ತಾರೆ.

'ಕೆರೆಗೆ ಹಾರ'ದ ಕುರಿತು ಇದುವರೆಗೆ ನಡೆದ ಚರ್ಚೆ ವಾಗ್ವಾದಗಳು ಎರಡು ನೆಲೆಗಳಲ್ಲಿ ಕಥನಗೀತೆಯನ್ನು ಅರ್ಥೈಸಿವೆ. ಒಂದು: ಪಠ್ಯಕೇಂದ್ರಿತವಾಗಿ ನಿಂತು ಕಥನಗೀತೆಯ ಕಾವ್ಯಗುಣವನ್ನು ಸೊಗಸನ್ನು ಹುಡುಕಾಡಿವೆ. ಇನ್ನೊಂದು; ಪುರುಷಕೇಂದ್ರಿತವಾಗಿ ನಿಂತು ಹೆಣ್ಣನ್ನು ಆದರ್ಶ ಭಾರತೀಯ ಸಾಂಸ್ಕೃತಿಕ ರಾಯಭಾರಿಯಾಗಿ ಮುಂದಿಟ್ಟು ಹೆಣ್ಣಿನ ಸಾವನ್ನು, ಹೆಣ್ಣಿನ ಬಲಿಯನ್ನು ವೈಭವೀಕರಿಸಿ ಕೊಂಡಾಡಿವೆ. ಪುರುಷನಿಷ್ಠ ನಿಲುವು ಹೆಣ್ಣಿನ ಬಲಿಯನ್ನು ಬಲಿದಾನವೆಂದು ನಿರ್ವಚಿಸಿ ಗಂಡನ್ನು ನಿರಪರಾಧಿಯಾಗಿ ಬಿಂಬಿಸಿ ರಕ್ಷಿಸಿದೆ. ಲಿಂಗಸೂಕ್ಷ್ಮವಿಲ್ಲದ ಪುರುಷಪರ ಪರಿಕಲ್ಪನಾತ್ಮಕ ಚೌಕಟ್ಟಿನಲ್ಲಿ ನಿಂತು ಹೆಣ್ಣನ್ನು, ಹೆಣ್ಣುತನವನ್ನು ವ್ಯಾಖ್ಯಾನಿಸಿದೆ. ಹೀಗಾಗಿಯೇ ಇಲ್ಲಿನ ದುರಂತ ಎಂದರೆ ನಿಜದ ಹೆಣ್ಣುದನಿ ಕೇಳದಿರುವುದು, ಹೆಣ್ತನವನ್ನು ಕಾಣದಿರುವುದು. 'ಕೆರೆಗೆ ಹಾರ'ದ ಹೆಣ್ಣಿನ ಮೌನವನ್ನು ನಮಗೆ ಸ್ವಲ್ಪ ಆಲಿಸಲು ಸಾಧ್ಯವಾದರೆ ಆ ಹೆಣ್ಣುಜೀವದ ಕುದಿತ, ತುಡಿತ, ಹೊಯ್ದಾಟ, ಸಂಕಟ, ಸಂಘರ್ಷ, ದಮನ, ಧಾವಂತ, ದುರಂತ ಎಲ್ಲವೂ ಸಾಲು ಸಾಲು ತೆರೆದುಕೊಳ್ಳುತ್ತದೆ; ಪುರುಷನ ಎಲ್ಲ ಕ್ರೌರ್ಯಗಳು ಬಯಲುಗೊಳ್ಳುತ್ತದೆ. 'ಕೆರೆಗೆ ಹಾರ'ದಲ್ಲಿ ಬಿಚ್ಚಿಕೊಳ್ಳುವ ಗಂಡಿನ ಅಧಿಕಾರಶಾಹಿ ವಾಸ್ತವದಲ್ಲಿ ಈ ಇಡೀ ಕಥೆ ಹೊಸವ್ಯಾಖ್ಯಾನವನ್ನು ಬಯಸುತ್ತದೆ. ಮರುಮೌಲ್ಯ ನಿರ್ಮಾಣಕ್ಕೆ ಒತ್ತಾಯಿಸುತ್ತದೆ. ಇಲ್ಲಿನ ಆರು ಪಠ್ಯಗಳಲ್ಲಿ ಸಮಾನವಾಗಿರುವ ಒಂದು ಅಂಶವೆಂದರೆ ಕೆರೆಗೆ ಹಾರ ಆದವಳು ಹೆಣ್ಣು ಎನ್ನುವುದು ಮತ್ತು ನಿರ್ದಿಷ್ಟವಾಗಿ ಆಕೆ ಕುಟುಂಬದ ಸೊಸೆಹೆಣ್ಣು ಆಗಿರುವುದು. ಸತ್ಯದ ಹುಡುಕಾಟದಲ್ಲಿ ನನಗಿರುವ ಪ್ರಶ್ನೆ ಕೆರೆಗೆ ಹಾರಕ್ಕೆ-ನರಬಲಿಗೆ ಹೆಣ್ಣೇ ಏಕೆ? ಮತ್ತು ಅದು ಮನೆ ಸೊಸೆಯೇ ಏಕೆ? ಎನ್ನುವುದು. ಇಲ್ಲಿಯೇ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ, ಕೆರೆಗೆ ಹಾರ ವಾಸ್ತವದಲ್ಲಿ ಹೆಣ್ಣೊಬ್ಬಳು ಸಮಷ್ಟಿ ಹಿತಕ್ಕಾಗಿ ಆತ್ಮ ಬಲಿದಾನ ಮಾಡಿದ್ದೆ ? ಅಥವಾ ಪುರುಷಹಿತ ಹೆಣ್ಣನ್ನು ಬಲಿಯಾಗಿಸಿದ್ದೇ? ಹೀಗೆ ಹೆಣ್ಣು ಬಲಿದಾನವಾದದ್ದೇ ನಿಜವಾದರೆ ಖಂಡಿತ ಹೆಣ್ಣಿನ ಬಲಿದಾನದ ಕಥೆ ಹೇಳುವ ಇಷ್ಟೊಂದು ಉದಾಹರಣೆಗಳು ಸಿಗುತ್ತಿರಲಿಲ್ಲ, ಬಲಿಯಾದವರು ಎಲ್ಲರೂ ಹೆಣ್ಣುಗಳೇ ಆಗುತ್ತಿರಲಿಲ್ಲ ಮತ್ತು ಅವರೆಲ್ಲ ಕುಟುಂಬದ ಸೊಸೆಹೆಣ್ಣುಗಳೇ ಆಗುತ್ತಿರಲಿಲ್ಲ. `ಗಂಡುಸಂಸ್ಕೃತಿ'ಯ ಕಟ್ಟುವಿಕೆಯಲ್ಲಿ ಹೆಣ್ಣಿನ ಹುಟ್ಟು, ಬದುಕು ಮತ್ತು ಸಾವನ್ನು ಗಂಡಿನ ಹಿರಿಮೆಗಾಗಿ ಬಳಸಿಕೊಳ್ಳಲಾಗಿದೆ ಮತ್ತು ಹೆಣ್ಣನ್ನು ನಿರಂತರವಾಗಿ ಕೆರೆಗೆ, ಕೋಟೆಗೆ, ಸೇತುವೆಗೆ ಬಲಿಯಾಗಿಸಿದೆ. `ಸಮಷ್ಟಿ ಹಿತ'ದ ಆದರ್ಶದಲ್ಲಿ ಗೌಡನನ್ನು ಒಪ್ಪಿಕೊಂಡರೂ ಆದರ್ಶದ ಕಾಯ್ದುಕೊಳ್ಳುವಿಕೆಗೆ ಗೌಡ ಸ್ವತಃ ತನ್ನನ್ನು, ತನ್ನ ಹೆಂಡತಿ, ಮಗ ಅಥವಾ ಮಗಳನ್ನು ಕೆರೆಗೆ ಹಾರ ಕೊಡಲಿಲ್ಲ ಏಕೆ? ಈ ಎಲ್ಲರ ಸಾವನ್ನು ಒಪ್ಪಿಕೊಳ್ಳದ